ಓ ಎಸ್ ನಂ. 41/2016
ಪಿ ಡಬ್ಲ್ಯೂ: 1
ದಿನಾಂಕ 29-03-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 2 ರಿಂದ 4ನೇ ಪ್ರತಿವಾದಿ ಪರ: ಶ್ರೀ ಕೆ ಎನ್ ಎಂ ವಕೀಲರಿಂದ:

2 ರಿಂದ 4ನೇ ವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳಾಗಬೇಕು, ನಾವು ಒಂದೇ ಕುಟುಂಬದವರು. ನಾವು ಒಂದೇ ಕುಟುಂಬದವರು ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಗಳನ್ನು ಒಟ್ಟಾಗಿ ಖರೀದಿಸುವ ಬಗ್ಗೆ ನನ್ನ ಮತ್ತು 2 ರಿಂದ 4ನೇ ವಾದಿಗಳ ನಡುವೆ ಯಾವುದೇ ಪತ್ರ ಬರವಣಿಗೆಯಾಗಿರುವುದಿಲ್ಲ. ನಾನು ಸಲ್ಲಿಸಿರುವ ವಾದಪತ್ರದಲ್ಲಿ ನಾನು ಮತ್ತು 2 ರಿಂದ 4ನೇ ವಾದಿಗಳು ಅಣ್ಣತಮ್ಮಂದಿರು ಎಂಬುದು ಎಲ್ಲಿಯೂ ನಮೂದಾಗಿಲ್ಲ ಎಂದರೆ ನಿಜ. 35 ಲಕ್ಷ ರೂಗಳಿಗೆ ದಾವಾ ಆಸ್ತಿಯ ಖರೀದಿಗೆ ಮಾತಾಗಿದ್ದು ಅದರ ಪೈಕಿ 34 ಲಕ್ಷ ರೂಗಳ್ನು ಮುಂಗಡವಾಗಿ ಕೊಟ್ಟಿದ್ದು, ಯಾರು ಯಾರು ಎಷ್ಟು ಎಷ್ಟು ಹಣವನ್ನು ಕೊಡುವುದೆಂದು ನನ್ನ ಮತ್ತು 2 ರಿಂದ 4ನೇ ವಾದಿಗಳ ನಡುವೆ ಪತ್ರ ಬರವಣಿಗೆಯಾಗಿಲ್ಲ.

ದಾವಾ ಆಸ್ತಿಯ ವ್ಯವಹಾರ ಬಾಬ್ತು 34 ಲಕ್ಷ ರೂಗಳನ್ನು ಕೊಟ್ಟಿದ್ದು, ನಾನು ಮತ್ತು 2 ರಿಂದ 4ನೇ ವಾದಿಗಳು ತಲಾ 8.5 ಲಕ್ಷ ರೂಗಳನ್ನು ಹಾಕಿರುತ್ತೇವೆ. ಈ ವಿಚಾರವನ್ನು ದಾವಾಪತ್ರದಲ್ಲಿ ನಮೂದು ಮಾಡಿಲ್ಲ. ದಿನಾಂಕ 10/07/2013 ರಂದು ಪತ್ರವಾಗುವ ಕಾಲಕ್ಕೆ ನನ್ನ ಮತ್ತು 2 ರಿಂದ 4ನೇ ವಾದಿಗಳ ಬಳಿ ಹಣ ಇದ್ದದ್ದನ್ನು ತೋರಿಸಲು ನಮ್ಮಗಳ ಬ್ಯಾಂಕ್ ಪಾಸ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪತ್ರವಾಗುವ ಕಾಲಕ್ಕೆ ಒಬ್ಬೊಬ್ಬರ ಬಳಿ 8.5

ಲಕ್ಷ ರೂ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮಗಳ ಮನೆಯಲ್ಲಿ ನಗದು ಇತ್ತು ಎಂದು ನುಡಿದಿರುತ್ತಾರೆ.

ನನಗೆ ಕಾಫೀ ತೋಟ ಇದೆ, ಅದನ್ನು ನಾನು ನೋಡಿಕೊಳ್ಳುತ್ತಿದ್ದೇನೆ. 2 ರಿಂದ 4ನೇ ವಾದಿಗಳಿಗೂ ಸಹ ಕಾಫೀ ತೋಟ ಇದೆ. ನನ್ನ ಮತ್ತು 2 ರಿಂದ 4ನೇ ವಾದಿಗಳ ಹೆಸರಿನಲ್ಲಿ ಯಾವುದೇ ತೋಟ ಇರುವುದಿಲ್ಲ, ನಮ್ಮಗಳ ತಂದೆಯ ಹೆಸರಿನಲ್ಲಿ ತೋಟ ಇರುತ್ತದೆ. ನಾವು ಕಾಫೀ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು ಸಾಕಷ್ಟು ಆದಾಯ ಇದೆ ಎಂದು ದಾವಾಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ನಿಜ. ಎಂ ಸಿ ಹಳ್ಳಿ ರಮೇಶ್ ರವರಿಂದ ದೇವರಾಜುರವರು ಪರಿಚಯವಾಗಿದ್ದು, ಸದರಿ ದೇವರಾಜುರವರ ಮೂಲಕ 1ನೇ ಪ್ರತಿವಾದಿರವರ ಪರಿಚಯ ನನಗೆ ಆಗಿರುತ್ತದೆ. ನನಗೆ 1ನೇ ಪ್ರತಿವಾದಿಯ ಪರಿಚಯ ವ್ಯವಹಾರವಾಗುವುದಕ್ಕೂ ಮೊದಲೇ ಇತ್ತು. ಪತ್ರವ್ಯವಹಾರ ಮಾಡುವ ಮೊದಲು 1ನೇ ಪ್ರತಿವಾದಿ ಯಾವ ಕೆಲಸ ಮಾಡುತ್ತಾರೆ ಮತ್ತು ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾನು ಮಾಹಿತಿ ಪಡೆದಿರುವುದಿಲ್ಲ.

ಕರಾರು ಆಗುವ ಮೊದಲು ದಾವಾ ಆಸ್ತಿಯ ಮಾಲೀಕರು ಯಾರೆಂದು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಆಸ್ತಿಯ ಮಾಲೀಕರು 1ನೇ ಪ್ರತಿವಾದಿಯ ತಂದೆ. ಸಾಮಾನ್ಯವಾಗಿ ಯಾರ ಹೆಸರಿನಲ್ಲಿ ಖಾತೆ ಇರುತ್ತದೋ ಅವರ ಜತೆ ವ್ಯವಹಾರ ಮಾಡಬೇಕು ಎಂದರೆ ನಿಜ. 1ನೇ ಪ್ರತಿವಾದಿ ತಂದೆ ದಾವಾ ಆಸ್ತಿಯನ್ನು ಯಾರಿಂದ ಖರೀದಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾಖಲೆ ನೋಡಿ ಹೇಳಬಲ್ಲೆ ಎಂದು ನುಡಿದಿರುತ್ತಾರೆ. ಪತ್ರ ವ್ಯವಹಾರವಾಗುವ

ಮೊದಲು ದಾವಾಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯು 1ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿದ್ದ ಕಾರಣ 1ನೇ ಪ್ರತಿವಾದಿಯನ್ನು ನೀವು ಕರೆದರ ಎಂಬ ಪ್ರಶ್ನೆಗೆ ಸಾಕ್ಷಿಯು ನೀವು ಪತ್ರ ಮಾಡಿಕೊಳ್ಳಿ ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ಹೆಸರಿಗೆ ಮಾಡಿಕೊಡುತ್ತೇನೆಂದು ಅವರು ಹೇಳಿದರು ಎಂದು ನುಡಿದಿರುತ್ತಾರೆ.

ರವೀಂದ್ರಕುಮಾರ್ ರವರಿಗೆ ಒಬ್ಬನೇ ಮಗ. ಕರಾರು ಆಗುವ ಕಾಲಕ್ಕೆ ನಾನು 1ನೇ ಪ್ರತಿವಾದಿಯ ವಂಶವೃಕ್ಷವನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ನೊಂದಣಿಯಾಗುವ ಕಾಲಕ್ಕೆ ಕೊಡುತ್ತೇನೆಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ನನಗೆ ಬ್ಯಾಂಕ್ ಆಫ್ ಬರೋಡಾ ಮತ್ತು ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇದೆ. ದರ್ಶನ್ ರವರಿಗೂ ಬ್ಯಾಂಕಿನಲ್ಲಿ ಖಾತೆ ಇದೆ. ನಾಗಪ್ಪ ಶೆಟ್ಟಿ ಮತ್ತು ಸತೀಶ್ ರವರಿಗೂ ಸಹ ಬ್ಯಾಂಕಿನಲ್ಲಿ ಖಾತೆ ಇದೆ. ನನಗೆ ಮತ್ತು 2 ರಿಂದ 4ನೇ ವಾದಿಗಳಿಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಗೊತ್ತಿದೆ. ನಾವು ಬ್ಯಾಂಕಿನಿಂದ ಚೆಕ್ಕುಗಳನ್ನು ಪಡೆದಿದ್ದೇವೆ ಎಂದರೆ ನಿಜ. 34 ಲಕ್ಷ ರೂ ಮುಂಗಡವನ್ನು ಆರ್ ಟಿ ಜಿ ಎಸ್ ಅಥವಾ ಚೆಕ್ಕಿನ ಮೂಲಕ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನಗದು ರೂಪದಲ್ಲಿ ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.